# LEARN TO LIVE UTSAV
## 3RD JULY 2018




"ನಿನಗೆ ನನ್ನನ್ನು ಅನುಸರಿಸುವ ಮನಸಿದ್ದಲ್ಲಿ ಅಪ್ಪಟ ನಿಸ್ವಾರ್ಥಿಯಾಗಿ ಬಾ, ಅಪ್ಪಟ ಪ್ರಾಮಾಣಿಕನಾಗಿ ಬಾ, ಅಪ್ಪಟ ಪರಿಶುದ್ಧನಾಗಿ ಬಾ ನಾನು ಸದಾ ನಿನ್ನೊಂದಿಗಿರುತ್ತೇನೆ".

– ಸ್ವಾಮಿ ವಿವೇಕಾನಂದ






ಮನುಷ್ಯನಲ್ಲಿರುವ ಅದ್ಭುತ ಚೈನತ್ಯವೇ ಬದುಕು ಇಂತಹ ಮನುಷ್ಯನಲ್ಲಿ ಅಪರಿಮಿತವಾದ ಶಕ್ತಿ ಅಡಗಿದೆ ಆ ಶಕ್ತಿಯೇ ಜೀವನ, ವ್ಯಕ್ತಿಯಲ್ಲಿರುವ ಅಜ್ಞಾನವೆಂಬ ಕತ್ತಲನ್ನು ಕಳೆಯುವುದೇ ಜೀವನ. ಜೀವನದಲ್ಲಿ ಅನೇಕ ಜನರು ಕುರಿಯಂತೆ ಬದುಕುತ್ತಿರುತ್ತಾರೆ ಆದರೆ ನಿಮ್ಮಲ್ಲಿರುವ ಅದಮ್ಯ ಶಕ್ತಿಯಿಂದ ಜೀವನವನ್ನು ನಿರ್ವಹಿಸಿ ಎಂಬ ಸ್ವಾಮಿ ವಿವೇಕಾನಂದರ ಮಾತುಗಳನ್ನು ಅಂತರರಾಷ್ಟ್ರೀಯ ವ್ಯಕ್ತಿತ್ವ ವಿಕಸನದ ತರಬೇತುದಾರರಾದ ಶ್ರೀ ರಮೇಶ್ ಉಮ್ರಾಣಿಯವರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಇಕ್ವಾಕ್(IQAC) ಹಾಗೂ ಬದುಕಲು ಕಲಿಯಿರಿ ಬಳಗದ ವಿವೇಕ ಸ್ಪಂದನ ವತಿಯಿಂದ ಪದವಿ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಉದ್ಘಾಟನಾ ಸಮಾರಂಭದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡುತ್ತಿದ್ದರು. ಉತ್ಕೃಷ್ಟ ಚಿಂತನೆಗಳು ಯಾವಾಗಲೂ ಮನಸ್ಸಿನಲ್ಲಿರಬೇಕು ಆಗಷ್ಟೆ ಉತ್ತಮ ಕೆಲಸಗಳನ್ನು ಮಾಡಲು ಸಾಧ್ಯ. ಬಿತ್ತಿದಂತೆ ಬೆಳೆ ಸುಳ್ಳಲ್ಲ, ತಾಯಿ ಬೇರೆಯಲ್ಲ, ತಾಯ್ನಾಡು ಬೇರೆಯಲ್ಲ. ಶಿಕ್ಷಣದಿಂದ ಜ್ಞಾನ ಬರುತ್ತದೆ ಜ್ಞಾನದಿಂದ ಸದ್ಬುದ್ಧಿ ಬರುತ್ತದೆ ಹಾಗೂ ವಿದ್ಯಾರ್ಥಿಗಳಲ್ಲಿ ವೈಚಾರಿಕತೆ ಬೆಳೆಯುವಂತೆ ಮಾಡುತ್ತದೆ ಎಂದು ತಿಳಿಸಿದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಮಾಜಿ ವಿಧಾನ ಪರಿಷತ್ ಸದಸ್ಯರಾದ ಶ್ರೀ ಡಿ. ಮಾದೇಗೌಡ ಅವರು ಮಾತನಾಡುತ್ತಾ ಮೈಸೂರು ನಗರದಾದ್ಯಂತ ತೊಂಬತ್ತು ದಿನಗಳ ಕಾಲ ಮೂರು ಹಂತದಲ್ಲಿ ಸ್ವಾಮಿ ಜಗದಾತ್ಮಾನಂದಜೀ ಮಹಾರಾಜ್‌ರವರು ಬರೆದಿರುವ "ಬದುಕಲು ಕಲಿಯಿರಿ" ಎಂಬ ಪುಸ್ತಕದ ಉತ್ಸವವನ್ನು ಏರ್ಪಡಿಸಲಾಗಿದೆ. ನಿಮ್ಮನ್ನು ನೀವು ಹೇಗೆ ನಿರ್ಮಾಣ



ಮಾಡಿಕೊಳ್ಳಬಲ್ಲರಿ ಎಂಬುದೇ ಈ ಪುಸ್ತಕದ ತಿರುಳಾಗಿದ್ದು, ಸಮಾಜದ ಎಲ್ಲಾ ಸ್ತರಕ್ಕು ತಲುಪಿಸುವ ಕಾರ್ಯವನ್ನು ಈ ಉತ್ಸವದ ಮೂಲಕ ಮಾಡಲಾಗುತ್ತಿದೆ ಎಂದರು.





ಕಾರ್ಯಕ್ರಮದಲ್ಲಿ ರಾಮಕೃಷ್ಣಾಶ್ರಮದ ಸಂತೋಷ್ ಮಹಾರಾಜ್ ಸ್ವಾಮೀಜಿ, ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಶ್ರೀ ಗುಂಡಪ್ಪಗೌಡ, ಕಾರ್ಯದರ್ಶಿ ಶ್ರೀ ಪಿ. ವಿಶ್ವನಾಥ್, ಯೋಗಪಟು ರಾಘವೇಂದ್ರ ಪೈ, ಬಸವೇಗೌಡ, ಶ್ರೀಧರ ರಾಜೇ ಅರಸ್, ಕಾಲೇಜಿನ ಪ್ರಾಂಶುಪಾಲರಾದ ಡಾ. ಎಸ್. ಮರೀಗೌಡ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು, ವಿಶೇಷ ಆಹ್ವಾನಿತರು ಭಾಗವಹಿಸಿದ್ದ ಕಾರ್ಯಕ್ರಮವನ್ನು ಪ್ರೊ. ಧನಂಜಯ ಪಾಲಹಳ್ಳಿ ಸ್ವಾಗತಿಸಿ ನಿರೂಪಿಸಿದರೆ, ಪ್ರೊ. ಎನ್. ಮೋಹನ್ ಕುಮಾರ್ ವಂದಿಸಿದರು.

